ನಾಗರಿಕತೆ, ಯುದ್ಧ ದಾಹ ಮತ್ತು ರಾಜ್ಯ ಸಾಧನೆಯ ಸಾಹಸಗಳು ಹುಟ್ಟಿಕೊಳ್ಳುತ್ತಾ ಅದರೊಂದಿಗೆ ಮನೆಯಲ್ಲೇ ಉಳಿಯಬೇಕಾದ ಹೆಣ್ಣು ಮಕ್ಕಳ ಜೀವನ ಕ್ರಮದಲ್ಲಿ ಪಾತಿವ್ರತ್ಯ ನಿಯಂತ್ರಣ ಮತ್ತು ಅದರಿಂದ ಬಿಡುಗಡೆ ಇವೆರಡರ ಸಂಘರ್ಷದ ನಡುವೆ ಈ ಬಗೆಯ ಕಥನಗಳು ಹೆಚ್ಚು ಹೆಚ್ಚು ಸೃಷ್ಟಿಯಾಗುತ್ತಾ ಬಂದಿವೆ.

★★★

ಬೇರೆಲ್ಲ ಕವಿಗಳಿಗಿಂತಲೂ ಪ್ರತ್ಯೇಕ ಕಥನ ಕ್ರಮವನ್ನು ರೂಪಿಸಿದ ಜನ್ನನ ಜೀವನವೂ ರಮ್ಯ, ರೋಚಕವಾಗಿದೆ. ಅವನ ಜೀವನ ವಿವರಗಳನ್ನು ಕುರಿತು ಬರೆಯುವುದು ವಿದ್ವಾಂಸರಿಗೇನೂ ಕಷ್ಟವೆನಿಸಿಲ್ಲ. ಯಾಕೆಂದರೆ ಜೈನ ಕವಿಗಳು ತಂತಮ್ಮ ವಿವರಗಳನ್ನು ಎಷ್ಟು ಸಾಧ್ಯವೋ ಅಷ್ಟನ್ನು ತಮ್ಮ ಕೃತಿಗಳಲ್ಲಿ ಹೇಳಿಕೊಂಡಿರುವುದುಂಟು. ಅಲ್ಲಲ್ಲಿ ಅವರನ್ನು ಕುರಿತ ಶಾಸನಾಧಾರಗಳು, ಇತರೇ ಕಾವ್ಯಾಧಾರ, ಹಸ್ತಾಕ್ಷರ ದೊರೆತಿರುವುದಿದೆ. ಆದರೆ ವಚನಕಾರರೇ ಮೊದಲಾಗಿ ಕೀರ್ತನಕಾರರು ಮತ್ತು ಇತರೇ ಕೆಲವು ಪ್ರಸಿದ್ಧ ಕವಿಗಳು ತಮ್ಮ ಜೀವನ ಸಂಗತಿ ಕುರಿತ ಸೂಚನೆಗಳನ್ನೇ ಕಾಣಿಸಿಲ್ಲವೆಂಬುದು ಕನ್ನಡ ವಿದ್ವಾಂಸರಿಗೆಲ್ಲ ತಿಳಿದಿರುವುದೇ ಆಗಿದೆ. ಅವರ ಸೃಷ್ಟಿಗೆ ಅವರ ಅಂಕಿತನಾಮಗಳಷ್ಟೇ ಆಧಾರ. ಇದೇನೇ ಇರಲಿ ಜನ್ನನು ತನ್ನ ಪರಿಚಯ ಕುರಿತು ತಾನೇ ಹೇಳಿಕೊಂಡಿರುವ ಪದ್ಯ ಹೀಗಿದೆ:

ನರಸಿಂಗನ ಚೋಳ ಕುಳೋ
ದ್ಧರಣನ ಸರ್ವಜ್ಞಭೂಪನೋಲಗದೊಳ್ನಿಂ
ದಿರೆ ದಂಡಾದೀಶಂ ಕು
ಳ್ಳಿರೆ ಮಂತ್ರಿ ತೊಡಂಕೆ ಕವಿ ಜನಾರ್ದನ ದೇವಂ॥

ಈ ಪದ್ಯದಲ್ಲಿ ಹೊಯ್ಸಳರ ವೀರಬಲ್ಲಾಳನ (1172–1220) ಆಶ್ರಯದಲ್ಲಿ ಇದ್ದ ಜನ್ನ ಯಾವ್ಯಾವ ಸಂದರ್ಭದಲ್ಲಿ ಏನೇನು ಜವಾಬ್ದಾರಿಗಳನ್ನು ನಿರ್ವಹಿಸಿದನೆಂಬುದನ್ನು ಕಾಣಿಸುತ್ತ, ನಿಂತಿದ್ದರೆ ಸೈನ್ಯಾಧಿಕಾರಿ, ಕುಳಿತಿದ್ದರೆ ಮಂತ್ರಿ, ಬರೆಯಲು ತೊಡಗಿದರೆ ಕವಿ ಜನಾರ್ದನ ದೇವನೆಂದುಕೊಂಡಿದ್ದಾನೆ. ಈ ಕವಿಯ ಇನ್ನಿತರೇ ಬಿರುದು ಮತ್ತು ಶ್ರೀಮಂತಿಕೆಯ ವಿವರಗಳು ಓದುಗರು ನೆನಪಿನಲ್ಲಿಟ್ಟುಕೊಳ್ಳಲಾಗದಷ್ಟು ವಿಪುಲವಾಗಿವೆ. ಅನೇಕ ಶೈವ, ವೈಷ್ಣವ ಕವಿಗಳು ತಮ್ಮ ಕೃತಿ ರಚನೆಯಲ್ಲಿ ದೈವ ಪಾರಮ್ಯವನ್ನು ಬಿಟ್ಟು ತಮ್ಮದೇನೂ ಇಲ್ಲ ಎಂಬಂತೆ ಹೇಳಿಕೊಂಡಿದ್ದರೆ, ಜೈನ ಕವಿಗಳು ತಾವೇ ಎಲ್ಲ ಎಂದು ಹೆಮ್ಮೆಯಿಂದ ಹೇಳಿಕೊಂಡಿರುವುದುಂಟು. ಈ ಕ್ರಮದಲ್ಲಿ ಸರಸ್ವತಿಯೇ ಜನ್ನನ ವಕ್ತ್ರಾಂಬೋಜವನ್ನು ಸಾರ್ದು ಜಾಣೆಯಾದಳಂತೆ, ಸೊಬಗೆಯಾದಳಂತೆ, ಸುಸ್ಥಿತೆಯಾದಳಂತೆ! ಇವನ ವಿದ್ಯಾ ಸಂಪನ್ನತೆಗೆ ಇವನ ಸುತ್ತಮುತ್ತ ಇದ್ದ ಪಂಡಿತ ಬಂಧುವರ್ಗವೂ ಕಾರಣವೆಂಬಂತೆ ವಿದ್ವಾಂಸರು ಹೇಳಿರುತ್ತಾರೆ. ಸೊಬಗಿನ ಅಭಿನವ ಮದನನಾಗಿದ್ದ ಇವನನ್ನು ಅದೇ ಯೌವನಕ್ಕೆ ಬಂದ ಹೆಣ್ಣು ಮಕ್ಕಳು ನಿರಂತರವಾಗಿ ಮುಟ್ಟಿ, ತಟ್ಟಿ, ಕಚ್ಚಿ ಮೈಯೆಲ್ಲ ಗಾಯಗೊಳಿಸಿದ್ದರಂತೆ. ಅರಮನೆಯ ಕವಿಗಳಾಗಿದ್ದವರಿಗೆ, ಮಂತ್ರಿಗಳಾಗಿದ್ದವರಿಗೆ ಇದು ಅಸಹಜವೇನಲ್ಲ, ಅಲಭ್ಯವೂ ಅಲ್ಲ. ಅಧಿಕಾರ ಸಂಪರ್ಕವಿದ್ದಲ್ಲಿ ಬಿರುದು ಬಹುಮಾನಗಳು ಕೈ ಹಾಕಿದೆಡೆ ಸುಲಭವಾಗಿ ದಕ್ಕುವಂಥದ್ದೇ!

ಜನ್ನನು ಬರೆದ ಎರಡು ಪ್ರಮುಖ ಕಾವ್ಯಗಳ ಜತೆಗೆ ಅವನದೇ 'ಅನುಭವ ಮುಕುರ' ಅಥವಾ 'ಸ್ಮರ ತಂತ್ರ' ಎಂಬ ಪುಟ್ಟಗ್ರಂಥವಿರುವುದಾಗಿ ವಿದ್ವಾಂಸರ ಅಭಿಪ್ರಾಯವಿದೆ. ಅದರಲ್ಲಿ ಸರಿಸುಮಾರು ನೂರರಷ್ಟು ವೃತ್ತ ಜಾತಿ ಪದ್ಯಗಳು ಸ್ತ್ರೀ ಪುರುಷರ ಅಂತರ್ಗತ ಕಾಮ, ಪ್ರೇಮ ಸಂಗತಿಗಳು ವಿವರಿಸಲ್ಪಟ್ಟಿವೆ. ಈ ಕಾವ್ಯವನ್ನು ಜನ್ನನೇ ಬರೆದನೇ, ಬರೆದಿದ್ದರೆ ಯಾವ ವಯಸ್ಸಿನಲ್ಲಿ